ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 92-97
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರೈತನಾಯಕ ಕೆ.ಎಸ್.ಪುಟ್ಟಣ್ಣಯ್ಯರ ಸಾಮಾಜಿಕ ಸಾಧನೆಗಳು

ಮಂಜು ಎಸ್[1] ಮತ್ತು ಪ್ರೊ.ಶಂಕರನಾರಾಣಪ್ಪ[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

***Abstract:***

*ರೈತನಾಯಕ ಕೆ.ಎಸ್. ಪುಟ್ಟಣ್ಣಯ್ಯ ಅವರು ಕರ್ನಾಟಕದ ರೈತ ಚಳವಳಿಯ ಪ್ರಮುಖ ನಾಯಕರು ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಜನಪರ ವ್ಯಕ್ತಿತ್ವವಾಗಿದ್ದರು. ರೈತರ ಹಕ್ಕುಗಳು, ನ್ಯಾಯಯುತ ಬೆಲೆ, ಕೃಷಿ ನೀತಿಗಳ ಸುಧಾರಣೆ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಅವರು ನಿರಂತರವಾಗಿ ಹೋರಾಟ ನಡೆಸಿದರು. ಅವರ ಸಾಮಾಜಿಕ ಸಾಧನೆಗಳು ರೈತ ಸಮುದಾಯದ ಸಬಲೀಕರಣ, ಪ್ರಜಾಪ್ರಭುತ್ವದ ಮೌಲ್ಯಗಳ ಬಲವರ್ಧನೆ ಹಾಗೂ ಜನಪರ ಆಡಳಿತದ ಸ್ಥಾಪನೆಗೆ ಮಹತ್ವದ ಕೊಡುಗೆ ನೀಡಿವೆ. ಈ ಅಧ್ಯಯನವು ಕೆ.ಎಸ್. ಪುಟ್ಟಣ್ಣಯ್ಯ ಅವರ ಸಾಮಾಜಿಕ ಚಿಂತನೆ, ಹೋರಾಟಗಳು ಹಾಗೂ ರೈತ ಸಂಘಟನೆಗಳ ಮೂಲಕ ಸಮಾಜದ ಮೇಲೆ ಬೀರಿದ ಪರಿಣಾಮವನ್ನು ವಿಶ್ಲೇಷಿಸುತ್ತದೆ. ಜೊತೆಗೆ, ಪರಿಸರ ಸಂರಕ್ಷಣೆ, ಸ್ವದೇಶಿ ಕೃಷಿ, ಸಾಮಾಜಿಕ ಸಮಾನತೆ ಮತ್ತು ಜನಜಾಗೃತಿಯಲ್ಲಿ ಅವರ ಪಾತ್ರವನ್ನು ಪರಿಶೀಲಿಸುತ್ತದೆ. ಅವರ ನಾಯಕತ್ವವು ರೈತ ಸಮುದಾಯದಲ್ಲಿ ಸಂಘಟಿತ ಹೋರಾಟದ ಮನೋಭಾವವನ್ನು ಬೆಳೆಸಿದಷ್ಟೇ ಅಲ್ಲದೆ, ಸಾರ್ವಜನಿಕ ನೀತಿಗಳ ಮೇಲೆ ಪರಿಣಾಮ ಬೀರಿದುದನ್ನೂ ಅಧ್ಯಯನವು ಒತ್ತಿಹೇಳುತ್ತದೆ. ಇಂದಿನ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಸಂದರ್ಭದಲ್ಲಿ ಅವರ ವಿಚಾರಧಾರೆಗಳು ಇನ್ನಷ್ಟು ಪ್ರಸ್ತುತವಾಗಿವೆ ಎಂಬುದನ್ನು ಈ ಸಂಶೋಧನೆ ಪ್ರತಿಪಾದಿಸುತ್ತದೆ.*

**Keywords:** *ಕೆ.ಎಸ್. ಪುಟ್ಟಣ್ಣಯ್ಯ, ರೈತ ಚಳವಳಿ, ಸಾಮಾಜಿಕ ಸಾಧನೆಗಳು, ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ನ್ಯಾಯ.*

## ಪೀಠಿಕೆ

ಶ್ರಮಿಕ ರತ್ನ ರೈತ ಮುಖಂಡ ಕೆ.ಎಸ್. ಪುಟ್ಟಣ್ಣಯ್ಯರವರಿಗಿದ್ದ ಸಾಮಾಜಿಕ ಕಳಕಳಿ, ರಾಜಕೀಯ ದೂರದರ್ಶಿತ್ವ, ಜಾತ್ಯತೀತ ನಿಲುವು, ಮೌಲ್ಯ ವಿರೋಧಿ ಧೋರಣೆ, ಹೃದಯ ವೈಶಾಲ್ಯತೆ ಗ್ರಾಮೀಣ, ಸಾಂಸ್ಕೃತಿಕ ಅಸ್ಮಿತತೆ ಹಾಗೂ ಆದರ್ಶ ಮೌಲ್ಯಗಳನ್ನ ಒಳಗೊಂಡ ವೈಚಾರಿಕ ಚಿಂತನೆಯ ವರ್ಣರಂಜಿತ ವ್ಯಕ್ತಿತ್ವವನ್ನ ಬದಿಗೊತ್ತಿ ಕೇವಲ ಅವರೊಬ್ಬ ರೈತ ಹೋರಾಟಗಾರ ರಾಜಕಾರಣಿ ಎನ್ನುವ ನೆಲೆಯಲ್ಲಿ ಮಾತ್ರ ಅವರನ್ನು ಗುರುತಿಸುತ್ತಾ ಹೋದರೆ ನಾವು ಅವರ ಅಂತಃಸತ್ವವನ್ನು ತಪ್ಪಾಗಿ ಗ್ರಹಿಸಿ ಅರ್ಥೈಸಿದಂತೆ. ಇವೆಲ್ಲದರಾಚೆಗಿನ ಅವರ ವಿಶಿಷ್ಟ ಪೂರ್ಣ ಗುಣವಿಶೇಷತೆ ನೈಜ ವ್ಯಕ್ತಿತ್ವವನ್ನು ಅನಾವರಣಗೊಳಿಸಿದೆ. ಇಲ್ಲವಾಗಿದ್ದಲ್ಲಿ ಸಾರ್ವಜನಿಕ ಬದುಕಿನಲ್ಲಿ ಈ ಪರಿಯ ಜನಾನುರಾಯಿ, ಜನಪ್ರಿಯ ನಾಯಕನಾಗಿ ಹೊರಹೊಮ್ಮಲಾಗುತ್ತಿರಲಿಲ್ಲ. ಇವರು ಓದಿದ್ದು ತುಂಬಾ ಕಡಿಮೆಯಾದರೂ

***Please cite this article as:*** ಮಂಜು ಎಸ್ ಮತ್ತು ಶಂಕರನಾರಾಣಪ್ಪ. (2026). ರೈತನಾಯಕ ಕೆ.ಎಸ್. ಪುಟ್ಟಣ್ಣಯ್ಯರ ಸಾಮಾಜಿಕ ಸಾಧನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 92–97

ಜೀವನಾನುಭವದಿಂದ ಪಡೆದಿದ್ದೇ ಹೆಚ್ಚು. ಸ್ವತಃ ಇವರೇ ಹೇಳಿದಂತೆ ಸಮಕಾಲಿನ ಎಲ್ಲಾ ತರಹದ ಸಾಮಾಜಿಕ ಸಮಸ್ಯೆಗಳಿಗೆ ಇರುವ ಏಕೈಕ ಪರಿಹಾರವೆಂದರೆ ಜಗತ್ತನ್ನ ಕಾಮನ್‌ಸೆನ್ಸ್ ಮತ್ತು ಹ್ಯೂಮನ್‌ಸೆನ್ಸ್ ಎಂಬ ಪೂರ್ಣದೃಷ್ಟಿಯಿಂದ ನೋಡಿದಾಗ ಮಾತ್ರ ಎಲ್ಲಾ ಸಮಸ್ಯೆಗಳಿಗೂ ಪರಿಣಾಮಕಾರಿಯುಕ್ತ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂಬುದು ಇವರ ಸ್ಥಿತಿಪ್ರಜ್ಞೆಯ ಅಭಿಮತ ವಾಗಿತ್ತು.

ರೈತ ಸಂಘಟನೆಗೆ ಸೇರಿದ ಹೊಸತರಲ್ಲಿ ಮೈಕು, ಭಾಷಣ ಎಂದರೆ ಮಾರು ದೂರ ಹೋಗುತ್ತಿದ್ದರು. ಎಷ್ಟೋ ಬಾರಿ ಭಾಷಣ ಮಾಡಲು ಕರೆದುಬಿಡುತ್ತಾರೆ ಅಂತ ಪ್ರತಿಭಟನೆ ಮತ್ತು ಚಳುವಳಿಯಲ್ಲಿ ಭಾಗವಹಿಸಿರುತ್ತಿದ್ದ ರೈತರಿಗೆ ಅಡಿಗೆ ತಯಾರಿ ಕೆಲಸಗಳಲ್ಲಿ ತೊಡಗಿಕೊಂಡು ಬಿಡುತ್ತಿದ್ದರು. ಕಾಲ ಕಳೆದಂತೆ ರೈತರ ಸಮಸ್ಯೆಗಳು ಮತ್ತು ಸಂಘಟನೆ ಇವರನ್ನು ಅತ್ಯುತ್ತಮ ಭಾಷಣಕಾರನನ್ನಾಗಿ ರೂಪಿಸಿತು. ಮುಂದೆ ಭಾಷಣ ಮಾಡುವ ಕಲೆ ಕರಗತವಾಯಿತು. ಸಾರ್ವಜನಿಕ ಭಾಷಣಗಳಲ್ಲಿ ಹಳೆ ಮೈಸೂರು ಭಾಷಾಶೈಲಿಯಲ್ಲಿ ಅತ್ಯಂತ ಸೊಗಸಾಗಿ ಹಾಸ್ಯಭರಿತವಾಗಿ ಮಾತನಾಡಿ ಜನರನ್ನ ನಗೆಗಡಲಲ್ಲಿ ಮುಳುಗಿಸುತ್ತಿದ್ದರು. ಅದರಲ್ಲಿಯೂ ಸದನದೊಳಗಂತು ರೈತರಿಗೆ ಸಂಬಂಧಿಸಿದ ಗಂಭೀರ ವಿಚಾರಗಳನ್ನ ವಿಡಂಬನಾತ್ಮಕವಾಗಿ ಹಾಸ್ಯಲೇಪನ ಮಾಡಿ ಇಡೀ ಸದನದ ಗಮನ ಸೆಳೆಯುತ್ತಿದ್ದಿದ್ದು ವಿಶೇಷವಾಗಿತ್ತು.

ಜನನಾಯಕರಾಗಿದ್ದರು ಒಂದಿಷ್ಟು ಅಮ್ಮುಬಿಮ್ಮಿಲ್ಲದೆ ತನ್ನೂರು ಮತ್ತು ನೆರೆ ಊರುಗಳಲ್ಲಿ ಯಾವುದೇ ಹಬ್ಬ–ಹರಿದಿನ, ಮದುವೆ, ತಿಥಿ ಕಾರ್ಯಗಳಲ್ಲಿ ಪುಟ್ಟಣ್ಣಯ್ಯ ಅತ್ಯುತ್ಸಾಹದಲ್ಲಿ ಭಾಗವಹಿಸುತ್ತಿದ್ದುದು ಮಾತ್ರವಲ್ಲದೆ ದೊಡ್ಡವರು ಚಿಕ್ಕವರೆನ್ನದೆ ಎಲ್ಲರೊಂದಿಗೆ ಬೆರೆಯುತ್ತಿದ್ದರು. ಸಾಮಾನ್ಯವಾಗಿ ಈ ಎಲ್ಲಾ ಕಾರ್ಯಗಳಲ್ಲಿಯೂ ಅನ್ನ ಸಂತರ್ಪಣೆ ಮಾಡುವುದು ವಾಡಿಕೆ. ಊಟಕ್ಕೆ ಕುಳಿತ ಜನವೇನಾದರೂ ಬಡಿಸಿದ್ದ ಊಟವನ್ನು ಸರಿಯಾಗಿ ಊಟ ಮಾಡದೆ ಅರ್ಧಂಬರ್ಧ ತಿಂದು ವ್ಯರ್ಥ ಮಾಡುವುದನ್ನು ಕಂಡರೆ ಅವರಿಗೆ ಎಲ್ಲಿಲ್ಲದ ಕೋಪ. ಸ್ವತಃ ರೈತರಾಗಿದ್ದ ಇವರು ಅನ್ನದ ಮಹತ್ವವನ್ನ ತಿಳಿದಿದ್ದರಿಂದ ಅದನ್ನ ಬೆಳೆಯಲು ರೈತನ ಬೆವರಿನ ಶ್ರಮ ಎಷ್ಟಿರುತ್ತದೆ ಎಂಬುದನ್ನು ತಿಳಿದಿದ್ದರಿಂದ ಇಂತಹ ಸಭೆ ಸಮಾರಂಭಗಳಲ್ಲಿ ಅವರೇ ಮೈಕ್ ಹಿಡಿದು ಜನರನ್ನು ಉದ್ದೇಶಿಸಿ ಅಣ್ಣ–ತಮ್ಮಂದಿರೇ, ಅಕ್ಕತಂಗಿಯರೇ ದಯವಿಟ್ಟು ನಿಮಗೆ ಎಷ್ಟು ಬೇಕೋ ಅಷ್ಟನ್ನ ಮಾತ್ರ ಊಟ ಹಾಕಿಸಿಕೊಂಡು ತಿನ್ನಿ, ಯಾವುದೇ ಕಾರಣಕ್ಕೂ ಅರ್ಧಂಬರ್ಧ ತಿಂದು ಎಲೆಯಲ್ಲಿ ಬಿಟ್ಟು ವ್ಯರ್ಥ ಮಾಡಬೇಡಿ ಎಂದು ಜನಜಾಗೃತಿ ಮೂಡಿಸುತ್ತಿದ್ದುದು ಅವರ ಕಾಳಜಿಯನ್ನ ತೀರಿಸುತ್ತಿತ್ತು. ಜೊತೆಗೆ ಜಾತಿಭೇದವಿಲ್ಲದೆ ಎಲ್ಲರೊಂದಿಗೆ ಕುಳಿತು ಸಹಪಂಕ್ತಿ ಭೋಜನ ಮಾಡುವುದೆಂದರೆ ಇವರಿಗೆ ಎಲ್ಲಿಲ್ಲದ ಸಂತೋಷ. ಅಲ್ಲದೆ ವಿವಿಧ ಬಗೆಯ ಖಾದ್ಯಗಳನ್ನು ಬಡಿಸುವಾಗ ತಾರತಮ್ಯ ಮಾಡಿದರು ಸಹ ಸಹಿಸಿಕೊಳ್ಳುತ್ತಿರಲಿಲ್ಲ. ಇವರು ಚಿಕ್ಕವರಾಗಿದ್ದಾಗ ಊರುಗಳಲ್ಲಿ ಆಚರಣೆಯಲ್ಲಿದ್ದ ಜಾತಿಯುಕ್ತ ಅಸಮಾನತೆಯ ದರ್ಶನವಾಗಿತ್ತು. ತನ್ನೊಂದಿಗೆ ಆಡಿ ಬೆಳೆದಿದ್ದ ಹರಿಜನ ಕೇರಿಯ ತನ್ನ ವಾರಿಗೆಯ ಗೆಳೆಯರು ಎಂದಾದರೂ ಮನೆಗೆ ಊಟಕ್ಕೆ ಬಂದರೆ ಅವರನ್ನ ತಮ್ಮ ಸರಿಸಮಾನಾಗಿ ಕೂರಿಸಿ ಊಟ ಹಾಕದೆ ಜಗಲಿ ಮೇಲೆ ಕೂರಿಸಿ ತಟ್ಟೆ ಬದಲು ಎಲೆಯ ಮೇಲೆ ಊಟ ಬಡಿಸುತ್ತಿದ್ದುದು ಪುಟ್ಟಣ್ಣಯ್ಯರಿಗೆ ಮನ ನೋಯಿಸುವ ಸಂಗತಿಯಾಗಿತ್ತು. ಹೀಗಿರುವಾಗಲೇ ಒಮ್ಮೆ ಒಂದು ಘಟನೆ ನಡೆಯಿತು. ಅದೇನೆಂದರೆ, ಹರಿಜನ ಸಮಾಜಕ್ಕೆ ಸೇರಿದ ಆಳಿನೊಂದಿಗೆ ಬೆಳಗಿನ ಗದ್ದೆಕೆಲಸ ಮುಗಿಸಿ ಊಟಕ್ಕೆಂದು ಮನೆಗೆ ಬಂದಾಗ ಪುಟ್ಟಣ್ಣಯ್ಯರ ತಾಯಿ ಮಗನಿಗೆ ಮನೆಯ ಒಳಾಂಗಣದಲ್ಲಿ ಕೂರಿಸಿ ಕಂಚಿನ ತಟ್ಟೆ ಕೊಟ್ಟು ತುಪ್ಪ ಹಾಕಿ ಊಟ ಬಡಿಸಿದರೆ, ಹರಿಜನ ಸಮಾಜದ ಆಳಿಗೆ ಜಗಲಿಯಲ್ಲಿ ಕೂರಿಸಿ ಬಾಳೆ ಎಲೆಯಲ್ಲಿ ಊಟ ಬಡಿಸಿ ತುಪ್ಪ ಹಾಕದಿರುವುದು ಇವರಿಗೆ ಎಲ್ಲಿಲ್ಲದ

ಕೋಪ ತರಿಸಿತು. ಇದನ್ನ ತಾಯಿಯ ಬಳಿ ಪ್ರಶ್ನಿಸಲಾಗಿ ಅದನ್ನೆಲ್ಲಾ ಅವರವರು ತಂದಿರುವ ಕರ್ಮಫಲವೆಂದು ಹೇಳುತ್ತಾ ಅನಿಷ್ಠ ಪದ್ಧತಿಯನ್ನ ಸಮರ್ಥಿಸಿಕೊಳ್ಳಲು ಯತ್ನಿಸಿದರು. ಇದರಿಂದ ಮತ್ತಷ್ಟು ಸಿಟ್ಟಿಗೆದ್ದು ಊಟವನ್ನು ಅರ್ಧಕ್ಕೆ ಬಿಟ್ಟು ದೇವರನ್ನು ಶಪಿಸಿ ಶ್ರಮ ಸಂಸ್ಕೃತಿಯನ್ನು ಸಮಾನವಾಗಿ ಗೌರವಿಸಬೇಕೆಂದು ತಾಯಿಗೆ ಬುದ್ಧಿವಾದ ಹೇಳಿದರಾದರೂ ಅದನ್ನು ಅರ್ಥೈಸಿಕೊಳ್ಳುವಷ್ಟು ಜ್ಞಾನ ಅವರ ತಾಯಿಗಿರಲಿಲ್ಲ.

ಹೀಗೆ ಒಂದು ದಿನ ಇವರ ತಾಯಿ ಹಸುವಿನ ಗಂಜಲವನ್ನು ಮನೆಯಲ್ಲೆಲ್ಲ ಪ್ರೋಕ್ಷಣೆ ಮಾಡಿ ಶುದ್ಧಿಕರಿಸಿ ಪೂಜೆಗೆ ಅಣಿಯಾಗುತ್ತಿದ್ದರು. ಇದನ್ನು ಕಂಡ ಪುಟ್ಟಣ್ಣಯ್ಯ ಈ ಹಸಿಗೆ ಹುಲ್ಲು ಹಾಕಿದ್ದು, ಸಗಣಿ ಬಾಚಿದ್ದು ಇದೇ ನಮ್ಮನೆ ಆಳು ಗಂಗಯ್ಯ, ಹಾಗಾದರೆ ಹಸು ಕೊಡುವ ಹಾಲನ್ನು ಏನ್ ಮಾಡುತ್ತೀರಿ ಹೇಳಿ ಎಂದು ತಾಯಿಯನ್ನು ಪ್ರಶ್ನಿಸಿದಾಗ ಅಂದಿನಿಂದ ಶಾರದಮ್ಮನವರಿಗೆ ಮನ ಪರಿವರ್ತನೆಗೊಂಡು ಎಲ್ಲರನ್ನು ಸಮಾನವಾಗಿ ಕಾಣಲಾರಂಭಿಸಿದರು.

ಐವತ್ತರ ಆಸುಪಾಸಿನ ಹರಿಜನ ಕೋಮಿಗೆ ಸೇರಿದ ಮಹಿಳೆ ಚಿಕ್ಕತಾಯಮ್ಮ ಇವರ ಮನೆಯ ಖಾಯಂ ಗದ್ದೆ ಕೆಲಸಕ್ಕೆ ಬರುತ್ತಿದ್ದ ಹೆಣ್ಣಾಳಗಿದ್ದಳು. ಈಕೆ ಮನೆಯವರನ್ನೆಲ್ಲಾ ಚೆನ್ನಾಗಿ ಒಗ್ಗಿಕೊಂಡಿದ್ದಳು. ಈ ನಡುವೆ ಚಿಕ್ಕತಾಯಮ್ಮ ಮೂರ್ನಾಲ್ಕು ದಿನ ಕೆಲಸಕ್ಕೆ ಬಾರದಿರುವುದನ್ನ ಸೂಕ್ಷ್ಮವಾಗಿ ಗಮನಿಸಿದ ಪುಟ್ಟಣ್ಣಯ್ಯ ವಿಚಾರಿಸಲೆಂದು ನೇರವಾಗಿ ಅವರ ಗುಡಿಸಲಿಗೆ ಹೋದಾಗ ಆಕೆ ಅನಾರೋಗ್ಯ ನಿಮಿತ್ತಳಾಗಿ ಮಲಗಿರುವುದನ್ನು ಕಂಡು ನೊಂದುಕೊಂಡರು. ಆಕೆಗೆ ಗಂಡ ಮಕ್ಕಳು ಯಾರು ಇಲ್ಲವೆಂಬುದನ್ನು ತಿಳಿದು ಮತ್ತಷ್ಟು ನೊಂದುಕೊಂಡು ವಾರಗಟ್ಟಲೆ ಆಕೆಯನ್ನ ಉಪಚರಿಸಿ ಸೇವೆ ಮಾಡಿದರು. ಮುಂದೆ ಅವರಿಬ್ಬರ ಸಂಬಂಧ ತಾಯಿ ಮಗನ ಸಂಬಂಧವಾಗಿ ಕೊನೆಯವರೆಗೂ ಉಳಿಯಿತು. ಆಕೆ ತನ್ನ ಕೊನೆಯ ಉಸಿರು ಇರುವವರೆಗೂ ಪುಟ್ಟಣ್ಣಯ್ಯನನ್ನ ಅತ್ಯಂತ ಗೌರವದಿಂದ ಕಾಣುತ್ತಿದ್ದಳು. ಹೀಗೆ ತನ್ನ ಕೊನೆಯ ದಿನಗಳಲ್ಲಿ ತನ್ನೆಲ್ಲಾ ಆಸ್ತಿಯನ್ನು ಮಗನಂತೆ ನೋಡಿಕೊಂಡ ಪುಟ್ಟಣ್ಣಯ್ಯರ ಹೆಸರಿಗೆ ಬರೆದು ವಯೋ ಸಹಜ ತೀರಿಕೊಂಡರು. ಆಗಲು ಸಹ ಪುಟ್ಟಣ್ಣಯ್ಯ ಮಗನ ಸ್ಥಾನದಲ್ಲಿ ನಿಂತು ಆಕೆಯ ಎಲ್ಲ ವಿಧಿವಿಧಾನ ಪೂರೈಸಿದ್ದು ಅವರ ಮಾತೃವಾತ್ಸಲ್ಯವನ್ನು ತೋರಿಸುತ್ತದೆ.

ಅಂಬೇಡ್ಕರ್ ವಿಚಾರಗಳನ್ನು ಕೇಳಿ ತಿಳಿದಿದ್ದ ಪುಟ್ಟಣ್ಣಯ್ಯ ಜಾತಿ ವ್ಯವಸ್ಥೆ ಸಂಪೂರ್ಣವಾಗಿ ನಿರ್ಮೂಲನವಾಗಬೇಕಾದರೆ ಅಂತರ್‌ಜಾತಿ ಮದುವೆಗಳು ಜಾಸ್ತಿ ಆಗಬೇಕೆಂಬುದು ಇವರ ವಾದವಾಗಿತ್ತು. ಈ ನಡುವೆ 1983 ರಲ್ಲಿ ತನ್ನೂರಿನ ಡ್ರೈವರ್ ಶಿವಣ್ಣನನ್ನ ಅಂತರ್ಜಾತಿ ವಿವಾಹ ಮಾಡಿಸಿ ಜಾತಿ ಜಾತಿಗಳ ನಡುವೆ ಸಾಮರಸ್ಯ ಬೆಸೆಯಲು ನಾಂದಿಯಾಡಿದರು. ಪುಟ್ಟಣ್ಣಯ್ಯ ಸಾಹಿತ್ಯ ಓದುತ್ತಿದ್ದು ತುಂಬಾ ಕಡಿಮೆ. ಸದಾ ಸಂಘಟನೆ ಹೋರಾಟಗಳಲ್ಲಿ ತೊಡಗಿಕೊಂಡಿದ್ದ ಇವರು ಓದುವುದಕ್ಕೆ ಸಮಯವಾಗಲಿ, ತಾಳ್ಮೆಯಾಗಲಿ, ಸರಿದೂಗಿಸ ಲಾಗುತ್ತಿರಲಿಲ್ಲ, ಈಗಾಗಲೇ ಸಾಹಿತ್ಯ ಲೋಕದಲ್ಲಿ ರಾಷ್ಟ್ರಕವಿ ಕುವೆಂಪುರವರ ಸಾಹಿತ್ಯದ ಪ್ರಭೇ ನಾಡಿನಾದ್ಯಂತ ಪಸರಿಸಿದ್ದರಿಂದ ಅವರ ಸಾಹಿತ್ಯವನ್ನ ಓದಬೇಕೆಂಬ ಆಸೆಯೇನು ಇತ್ತು. ಅದರಲ್ಲೂ ಕುವೆಂಪುರವರ ಮಂತ್ರಮಾಂಗಲ್ಯವೆಂಬ ಸರಳವಿವಾಹ ಪರಿಕಲ್ಪನೆಯಿಂದ ಸಾಕಷ್ಟು ಪ್ರಭಾವಿತರಾಗಿದ್ದರು. ಆ ಕಾಲಕ್ಕೆ ಸ್ವತಃ ಕುವೆಂಪುರವರೇ ತಮ್ಮೆಲ್ಲಾ ಮಕ್ಕಳನ್ನು ಸರಳವಿವಾಹ ಮಾಡಿ ನಾಡಿಗೆ ಮಾದರಿಯಾಗಿದ್ದು ಅವರ ಮೇಲಿನ ಗೌರವ ಮತ್ತಷ್ಟು ಹೆಚ್ಚಾಗಲು ಕಾರಣವಾಯಿತು. ಈ ನಡುವೆ ಮಂಡ್ಯದ ಹಳ್ಳಿಗಾಡಿನ ತಂದೆ ತಾಯಂದಿರು ಸಾಲ ಶೋಲ ಮಾಡಿ ತಮ್ಮ ಮಕ್ಕಳಿಗೆ ದೊಡ್ಡ ಚೌಲ್ಟ್ರಿಗಳಲ್ಲಿ ಅದ್ಧೂರಿ ಮದುವೆ ಮಾಡಿ ಇಕ್ಕಟ್ಟಿಗೆ ಸಿಲುಕುತ್ತಿದ್ದನ್ನು ಕಣ್ಣಾರೆ ಕಂಡಿದ್ದ ಪುಟ್ಟಣ್ಣಯ್ಯ ಸರಳವಿವಾಹ, ಸಾಮೂಹಿಕ ವಿವಾಹ ಮಾಡಿಕೊಳ್ಳುವಂತೆ ಎಲ್ಲರನ್ನ ಪ್ರೇರೇಪಿಸಿ,

ಪ್ರೋತ್ಸಾಹಿಸಲು ಅಭಿಯಾನ ಕೈಗೊಂಡರು. ತಮ್ಮ ಮಕ್ಕಳಿಗೂ ಸಹ ಸಾಮೂಹಿಕ ಸರಳವಿವಾಹ ಮಾಡಿಸಿದರು. ಪ್ರತಿವರ್ಷ ಬೇಬಿಬೆಟ್ಟದ ಜಾತ್ರೆಯಲ್ಲಿ ಸರಳ ಸಾಮೂಹಿಕ ವಿವಾಹ ಏರ್ಪಡಿಸಿ ದಾಂಪತ್ಯಕ್ಕೆ ಕಾಲಿಟ್ಟ ನವ ವಧುವರರಿಗೆ ಶುಭ ಹಾರೈಸಿ ಖುಷಿಪಡುತ್ತಿದ್ದರು. ನಂತರದ ದಿನಗಳಲ್ಲಿ ಮಂಡ್ಯದ ರೈತ ಸಭಾಂಗಣ ನೂರಾರು ಸರಳ ವಿವಾಹಗಳು ನಡೆದಿರುವುದಕ್ಕೆ ಇಂದಿಗೂ ಸಾಕ್ಷಿಯಾಗಿದೆ. ಇಂತಹ ವಿವಾಹ ಪದ್ಧತಿಯನ್ನು ಅಂದಿನ ಪ್ರಮುಖ ಪ್ರಗತಿಪರ ಚಿಂತಕರು ಹಾಗೂ ರೈತ ಮುಖಂಡರು ಬೆಂಬಲಿಸಿದರು. ಅವರಲ್ಲಿ ಕೆ.ಎಸ್.ನಂಜುಂಡೇಗೌಡ, ಕೆ.ಬೋರಯ್ಯ, ಕೋಣಸಾಲೆ ನರಸರಾಜು, ಪ್ರೊ. ಜಿ.ಟಿ ವೀರಪ್ಪ, ಸುನಂದಾ ಜಯರಾಮ, ಯದುಶೈಲಾ ಸಂಪತ್ತು ಇನ್ನು ಮುಂತಾದವರು.

ಇಷ್ಟಕ್ಕೆ ಸೀಮಿತವಾಗದ ಇವರ ಸಾಮಾಜಿಕ ಸುಧಾರಣಾ ಅಭಿಯಾನ ನಮ್ಮ ಹಳ್ಳಿಗಳಲ್ಲಿ ಸ್ವರ್ಗಸ್ತರಾದವರಿಗೆ ಪಾರಂಪರಗತವಾಗಿ ಆಚರಿಸಿಕೊಂಡು ಬರುತ್ತಿದ್ದ ತಿಥಿ ಕಾರ್ಯ ದಿನಗಳದಂತೆ ಅದನ್ನು ಕಳೆಕಟ್ಟುವಂತೆ ಮಾಡಲು ಬಾಡೂಟ ಏರ್ಪಡಿಸುವುದು, ಹರಿಕಥೆ, ಪಿಂಡ ಪ್ರಧಾನದಂತಹ ಮೂಢನಂಬಿಕೆ, ಕಂದಾಚಾರಕ್ಕೆ ಕಟ್ಟುಬಿದ್ದು ದುಂದುವೆಚ್ಚ ಮಾಡಿ ಕಷ್ಟಕ್ಕೆ ಸಿಲುಕುತ್ತಿದ್ದುದು ಪುಟ್ಟಣ್ಣಯ್ಯರಿಗೆ ಸರಿಕಾಣಲಿಲ್ಲ. "ಸತ್ತವರ ತಿಕ ಅತ್ಲಾಗೋ ಇತ್ಲಾಗೋ" ಎಂಬ ಹಿರಿಯರ ಅನುಭವದ ಮಾತಿನಂತೆ ತಿಥಿ ಕಾರ್ಯವನ್ನ ಸರಳೀಕರಿಸಲು ರೈತರಲ್ಲಿ ಜಾಗೃತಿ ಮೂಡಿಸಲು "ತಿಥಿ ಬಿಡಿ ಸಸಿ ನೆಡಿ" ಎಂಬ ಘೋಷ ವಾಕ್ಯದೊಂದಿಗೆ ನವ ಬಗೆಯ ತಿಥಿಕಾರ್ಯ ಪರಿಚಯಿಸಿ ಮೂಢನಂಬಿಕೆ, ಕಂದಾಚಾರಗಳಿಗೆ ಸವಾಲೆಸೆದು ಪರಿಸರ ಬೆಳೆಸಲು ಕರೆ ನೀಡಿ ಈ ನಡುವೆ ಅಕಾಲಿಕ ಮರಣಕ್ಕೆ ತುತ್ತಾದ ಕೀಲಾರದ ಪ್ರಗತಿಪರ ರೈತ ಮುಖಂಡನಾದ ಕೆ.ಎಸ್.ಸೋಮಶೇಖರ್ ರವರ ಪುತ್ರ ದಿವಂಗತ ಕೆ.ಎಸ್.ಅಮಿತ್‌ಕುಮಾರ್ ರವರ 11ನೇ ದಿನದ ಕಾರ್ಯವನ್ನ "ರೈತ ಸಂಸ್ಮರಣ ಪರಿಸರ ದಿನ"ವನ್ನಾಗಿ ಆಚರಿಸಿ ತಲತಲಾಂತರಗಳಿಂದ ಆಚರಿಸಿಕೊಂಡು ಬರುತ್ತಿದ್ದ ಮೂಢನಂಬಿಕೆಗೆ ತಿಲಾಂಜಲಿ ಹೇಳಲಾಯಿತು. ಮುಂದೆ ಇಂತಹ ಕಾರ್ಯಗಳಲ್ಲಿ ಶ್ರಮಜೀವಿಗಳನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮ ಹಮ್ಮಿಕೊಂಡು ಈ ಕಾರ್ಯಕ್ರಮಕ್ಕೆ ಬರುವ ಪ್ರತಿಯೊಬ್ಬ ವ್ಯಕ್ತಿಗೂ ಗಿಡ ನೀಡುವ ಮೂಲಕ ಪರಿಸರ ಕಾಪಾಡಲು ಉಪನ್ಯಾಸ ಏರ್ಪಡಿಸಲಾಗುತ್ತಿತ್ತು.

ಓದಿನಲ್ಲಿ ಹಿಂದುಳಿದಿದ್ದರು ಭವಿಷ್ಯದಲ್ಲಿ ತಾನೊಬ್ಬ ಕ್ರೀಡಾಪಟು ಆಗಬೇಕೆಂಬುದು ಅವರ ಮನದಾಸೆಯಾಗಿತ್ತು. ಚಿಕ್ಕ ವಯಸ್ಸಿನಿಂದಲೂ ಅಪ್ಪನ ಕಣ್ತಪ್ಪಿಸಿ ಗ್ರಾಮೀಣ ಕ್ರೀಡೆಗಳಾದ ಗಿಲ್ಲಿದಾಂಡು, ಬುಗುರಿ, ಕಬಡ್ಡಿ, ಖೋಖೋ ಅಂತಹ ಆಟಗಳನ್ನ ಆಡುತ್ತಿದ್ದರು. ಹೀಗೆ ಒಂದು ದಿನ ಕಾಲೇಜಿಗೆ ಚಕ್ಕರ್ ಹೊಡೆದು ಗೆಳೆಯರೊಂದಿಗೆ ಸಿನಿಮಾ ನೋಡಲು ಮಂಡ್ಯಕ್ಕೆ ಬಂದಿದ್ದರು. ಸಿನಿಮಾ ನೋಡಿ ಬರುವಾಗ ಮೈದಾನದಲ್ಲಿ ದೇಹದಾರ್ಢ್ಯ ಸ್ಪರ್ಧೆ ಏರ್ಪಡಿಸಲಾಗಿತ್ತು. ಕುತೂಹಲದಿಂದ ಅದನ್ನು ನೋಡಲು ಹೋದಾಗ ಗೆಳೆಯರೆಲ್ಲಾ ಇವರನ್ನು ಉರಿದುಂಬಿಸಿ ವೇದಿಕೆ ಹತ್ತಿಸಿಯೇ ಬಿಟ್ಟರು ತೀರ್ಪುಗಾರರು ಮತ್ತು ಆಯೋಜಕರು ಇವರ ಕಟ್‌ಮಸ್ತಾದ ಮೈಕಟ್ಟು ನೋಡಿ "ಮಿಸ್ಟರ್ ಮಂಡ್ಯ" ಎಂದು ಘೋಷಿಸಿ ಬಹುಮಾನ ನೀಡಿದರು. ಅಷ್ಟರಮಟ್ಟಿಗೆ ಕ್ರೀಡೆಗಳಲ್ಲಿ ಆ ಕಾಲಕ್ಕೆ ಹೆಸರು ಮಾಡಿದ್ದರು.

ಒಮ್ಮೆ ಗ್ರಾಮದಿಂದ ಪುಟ್ಟಣ್ಣಯ್ಯ ನೇತೃತ್ವದ 14 ಮಂದಿಯ ತಂಡ ಮಧ್ಯಪ್ರದೇಶದಲ್ಲಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಭಾಗವಹಿಸಲು ಹೋಗಬೇಕಾಗಿ ಬಂತು. ಅದು 15 ದಿನಗಳ ಸುದೀರ್ಘ ಪ್ರಯಾಣವಾಗಿದ್ದರಿಂದ ಅಷ್ಟು ದಿನಗಳಿಗೆ ಸಾಕಾಗುವಷ್ಟು ದವಸಧಾನ್ಯ, ಅಡಿಗೆ ಪರಿಕರಗಳೊಂದಿಗೆ ಟೆಂಪೊವೊಂದನ ಬಾಡಿಗೆಗೆ ಪಡೆದು ಪ್ರಯಾಣ ಬೆಳೆಸಲಾಯಿತು. ಆ ಕಾಲಕ್ಕೆ

ದರೋಡೆ ಕೃತ್ಯಗಳಿಗೆ ಕುಖ್ಯಾತಿಯಾಗಿದ್ದ ಅಪಾಯಕಾರಿ ಚಂಬಲ್‌ಕಣಿವೆ ದಾಟಿ ಅಂತೂ ಇಂತು ಮಧ್ಯಪ್ರದೇಶದ ರಾಜಧಾನಿ ಭೂಪಾಲ್ ತಲುಪಿದರು. ಕ್ರೀಡಾಕೂಟದ ಬಿಡುವಿನ ವೇಳೆ ಭೂಪಾಲ್ ನಗರದ ಸೊಬಗನ್ನ ನೋಡಲು ಹೋಗಿ ಆಕಸ್ಮಾತ್ ವೇಶ್ಯಾವಾಟಿಕೆ ಅಡ್ಡೆಯ ಒಳಗೆ ಪ್ರವೇಶ ಮಾಡಿದರು. ಅಲ್ಲಿನ ವೇಶ್ಯರು ಪುಟ್ಟಣ್ಣಯ್ಯ ದೇಹಸಿರಿ ನೋಡಿ ಅವರುಗಳೇ ಸ್ವತಃ ಹಣ ನೀಡಿ ತಮ್ಮೊಟ್ಟಿಗೆ ಇರಲು ಬಯಸಿದರು. ಆ ಗುಂಪಿನಲ್ಲಿ ಕನ್ನಡ ಭಾಷೆ ಬಲ್ಲವಳೊಬ್ಬಳು ಇದ್ದುದ್ದು ಆಶ್ಚರ್ಯವನ್ನುಂಟು ಮಾಡಿತು. ಆಕೆಯೂ ಸಹ ಇವರನ್ನ ಬಯಸಿದಾಗ ಆಕೆಯ ಆಕಾಂಕ್ಷೆಯನ್ನ ನಯವಾಗಿ ತಿರಸ್ಕರಿಸಿ, ನಾನು ಈ ಅಡ್ಡೆಗೆ ಆಕಸ್ಮಾತ್ ಬಂದಿದ್ದು, ನೀನು ನನಗೆ ಅಕ್ಕನ ಸಮಾನ ಎಂದು ತಿಳಿ ಹೇಳಿ ಭಾವನಾತ್ಮಕವಾಗಿ ಹತ್ತಿರವಾದರು. ನಂತರ ಆಕೆಯ ಹಿಂದಿನ ಕಣ್ಣೀರ ಕಥೆ ಕೇಳಿ ಕೊರಗಿ ತಾವು ತೆಗೆದುಕೊಂಡು ಹೋಗಿದ್ದ ಬಹುತೇಕ ಆಹಾರ ಪದಾರ್ಥಗಳನ್ನ ನೀಡಿ ಸಂತೈಸಿದರು. ಆಗ ಆಕೆ ಕೈಮುಗಿದು ಮುಂದಿನ ಜನ್ಮವೇನಾದರೂ ಇದ್ದರೆ ನಾನು ನಿಮ್ಮ ಅಕ್ಕನಾಗಿ ಹುಟ್ಟಿ ನಿಮ್ಮ ಋಣ ತೀರಿಸುತ್ತೇನೆ ಎಂದರು. ಇದಕ್ಕೆ ಪುಟ್ಟಣ್ಣಯ್ಯ ಮುಂದಿನ ಜನ್ಮ ಯಾಕಮ್ಮ ಈ ಜನ್ಮದಲ್ಲಿಯೇ ನೀನು ನನ್ನ ತಂಗಿ ಇದ್ದಂತೆ ಎಂದು ಮತ್ತೊಮ್ಮೆ ನಾನು ಇಲ್ಲಿಗೆ ಬಂದಾಗ ನಿನ್ನನ್ನು ಈ ಕೂಪೆಯಿಂದ ಕರ್ಕೊಂಡೋಗಿ ಗೌರವಯುತವಾಗಿ ಬದುಕಲು ಸಹಾಯ ಮಾಡುತ್ತೇನೆಂದು ಅಭಯ ನೀಡಿ ವಾಪಸ್ ಆದರು. ಹೀಗೆ ಅವರಲ್ಲಿದ್ದ ಮಹಿಳೆಯರ ಮೇಲಿದ್ದ ಅಪಾರವಾದ ಗೌರವವನ್ನು ತೋರಿಸುತ್ತದೆ.

ಸಕಲಕಲಾವಲ್ಲಭರಾಗಿದ್ದ ಇವರು ಕಲೆಯಲ್ಲಿಯೂ ಸಹ ಹಿಂದೆಯೇನು ಬಿದ್ದಿರಲಿಲ್ಲ. ಮೈಸೂರಿನ ಬನುಮಯ್ಯ ಕಾಲೇಜ್‌ನಲ್ಲಿ ಪದವಿ ವ್ಯಾಸಂಗ ಮಾಡುವಾಗಲೇ ಸಿನಿಮಾ ನಾಟಕದ ಗೀಳು ಅಚ್ಚಿಸಿಕೊಂಡಿದ್ದರು. ಮಾಜಿ ಸಚಿವರಾದ ಅಡಗೂರು ವಿಶ್ವನಾಥ ಇವರ ವಿದ್ಯಾರ್ಥಿ ಸಹಪಾಠಿಯಾಗಿದ್ದು ಅವರೊಟ್ಟಿಗೆ ಹೊಸದಾಗಿ ಬಿಡುಗಡೆಯಾಗುತ್ತಿದ್ದ ಎಲ್ಲಾ ಭಾಷೆಗಳ ಸಿನಿಮಾಗಳನ್ನ ನೋಡುತ್ತಿದ್ದರು. ಅದರಲ್ಲೂ ಇಂಗ್ಲಿಷ್ ಸಿನಿಮಾಗಳನ್ನು ಹೆಚ್ಚು ಇಷ್ಟಪಡುತ್ತಿದ್ದರು. ಕಾರಣ ಆ ಮೂಲಕವಾದರೂ ಸಹ ಇಂಗ್ಲಿಷ್ ಕಲಿಯಬಹುದೆಂಬ ಆಸೆಯಿಂದ. ಭವಿಷ್ಯದಲ್ಲಿ ಸಿನಿಮಾ ನಟನಾಗಿ ಪಾತ್ರ ಮಾಡಬೇಕೆಂಬ ಕನಸನ್ನೇನೂ ಕಂಡಿದ್ದರು ಆದರೆ ಅಪ್ಪನಿಗೆ ಮಗ ಕಲಾವಿದನಾಗುವುದು ಸುತಾರಾಂ ಇಷ್ಟವಿಲ್ಲದಿದ್ದರಿಂದ ಅದು ಕೈಗೂಡಲಿಲ್ಲ. ಈ ನಡುವೆ ಕ್ಯಾತನಹಳ್ಳಿ ಊರಿನ ಹಿರಿಯರೆಲ್ಲ ಸೇರಿ ಪೌರಾಣಿಕ ನಾಟಕ ಹಾಡಲು ತೀರ್ಮಾನಿಸಿದಾಗ ಪುಟ್ಟಣ್ಣಯ್ಯರಿಗೆ ಎಲ್ಲಿಲ್ಲದ ಸಂತೋಷವಾಯಿತು. ಆದರೆ ಅದಕ್ಕೆ ತಗಲುವ ವೆಚ್ಚವನ್ನು ಭರಿಸಲು ತನ್ನ ಬಳಿ ಹಣವಿರಲಿಲ್ಲ, ತನ್ನ ವಾರಿಗೆಯ ಗೆಳೆಯರೂಂದಿಗೆ ಸೇರಿ ಚಂದಯೆತ್ತಿ ಹಣ ಸಂಗ್ರಹಿಸಲಾಯಿತು. ಪುಟ್ಟಣ್ಣಯ್ಯ ತನ್ನ ತಾಯಿಯಿಂದಲೂ ಕಾಡಿಬೇಡಿ ತನ್ನ ಪಾತ್ರಕ್ಕೆ ಸಾಕಾಗುವಷ್ಟು ಹಣವನ್ನ ಒಟ್ಟುಗೂಡಿಸಿದರೂ. ನಂತರ ದೂರದ ಊರಿಂದ ನಾಟಕದ ಮೇಷ್ಟ್ರು ಕರಿಸಿ ಪುಟ್ಟಣ್ಣಯ್ಯ ಜಿದ್ದಿಗೆ ಬಿದ್ದು ದುರ್ಯೋಧನನ ಪಾತ್ರಕ್ಕೆ ಆಯ್ಕೆಯಾದರು. ಕೇವಲ ಒಂದು ತಿಂಗಳೊಳಗೆ ಕಠಿಣ ಸಂಭಾಷಣೆ, ಕಂದಗಳನ್ನ ಕಲಿತು ಬಣ್ಣ ಹಚ್ಚಿ ಕುರುಕ್ಷೇತ್ರ ನಾಟಕದಲ್ಲಿ ದುರ್ಯೋಧನನ ಪಾತ್ರಕ್ಕೆ ಜೀವ ತುಂಬಿದರು. ಅವರ ಮನೋಜ್ಞ ಅಭಿನಯಕ್ಕೆ ತಲೆದೂಗದವರಿಲ್ಲ, ಎಲ್ಲರಿಂದಲೂ ಮೆಚ್ಚುಗೆಗೆ ಪ್ರಸಂಶೆಗೆ ಒಳಗಾಗಿ ನಾಟಕ ಯಶಸ್ವಿಯಾಯಿತು. ಇವರು ಶಾಸಕರಾದ ಮೇಲಂತು ಪಾಂಡವಪುರ ತಾಲೂಕಿನ ಯಾವುದೇ ಊರುಗಳಲ್ಲಿ ನಾಟಕ ಮಾಡಿದರು ಇವರು ಕಂದವನ್ನಾಡದೆ ಯಾವುದೇ ನಾಟಕಗಳು ಉದ್ಘಾಟನೆಗೊಳ್ಳುತ್ತಿರಲಿಲ್ಲ. ಮುಂದೆ ಹಿರಿಯ ಹಾಗೂ ಕಿರುತರೆ ನಿರ್ದೇಶಕರು, ಆತ್ಮೀಯರು ಆಗಿದ್ದ ಟಿ.ಎನ್.ಸೀತಾರಾಮ್ ರವರ ನಿರ್ದೇಶನದ 'ಮುಕ್ತ ಮುಕ್ತ' ಧಾರವಾಹಿಯಲ್ಲಿ ರೈತ ನಾಯಕನ ಪಾತ್ರದಲ್ಲಿ ಚನ್ನಾಗಿ ಅಭಿನಯಿಸಿದರು.

ಭ್ರಷ್ಟಾಚಾರವನ್ನು ಇವರು ಅತ್ಯಂತ ಗಟ್ಟಿ ದನಿಯಲ್ಲಿ ಖಂಡಿಸುತ್ತಿದ್ದರು. ಈ ನಡುವೆ ದೇಶದಲ್ಲಿ ರಾಜಕೀಯ ಭ್ರಷ್ಟಾಚಾರ ವ್ಯಾಪಕವಾದಾಗ ಹಿರಿಯ ಗಾಂಧಿವಾದಿ ಅಣ್ಣಾಹಜಾರೆ ನೇತೃತ್ವದಲ್ಲಿ ದೇಶ ವ್ಯಾಪಿ ಭ್ರಷ್ಟಾಚಾರ ನಿರ್ಮೂಲನೆಗೆ ಆಗ್ರಹಿಸಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಜನಲೋಕಪಾಲ ಮಸೂದೆ ಜಾರಿಯಾಗಬೇಕೆಂದು ಅಗ್ರಹಿಸಿ ಸತ್ಯಾಗ್ರಹ ಕುಳಿತಾಗ ಅವರನ್ನ ಬೆಂಬಲಿಸಿ ಕರ್ನಾಟಕದದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ, ಎಂ.ಕೆ.ಸುಬ್ಬಯ್ಯ ಹಾಗೂ ನ್ಯಾಯಮೂರ್ತಿ ಸಂತೋಷ ಹೆಗ್ಗಡೆ ಜೊತೆಗೂಡಿ ಕೇಂದ್ರ ಸರ್ಕಾರದ ವಿರುದ್ಧ ಅಭಿಯಾನ ಕೈಗೊಂಡರು.

ನಾಲ್ಕು ದಶಕಗಳ ಕಾಲ ದಣಿವರಿಯದೆ ರೈತ ಸಂಘಟನೆ ರಾಜಕಾರಣದಲ್ಲಿ ತೊಡಗಿಕೊಂಡಿದ್ದ ಪುಟ್ಟಣ್ಣಯ್ಯ ಮಹಾ ಮಾನವತವಾದಿಯಾಗಿ ದೀನ ದಲಿತ ಮತ್ತು ಧಮನಿತರ ದನಿಯಾಗಿ ಸಮಾಜದ ಅಂಕುಡೊಂಕುಗಳನ್ನ ತಿದ್ದುವ ಪ್ರಾಮಾಣಿಕ ಪ್ರಯತ್ನ ಮಾಡಿದರು. ಅದರ ಜೊತೆಜೊತೆಗೆ ಕಲೆ, ಸಾಹಿತ್ಯ, ಸಂಗೀತ ಪೋಷಕರಾಗಿ ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ವರ್ಣರಂಜಿತ ವ್ಯಕ್ತಿತ್ವ ಇವರದು. ಈ ನಡುವೆ ರೈತ ಸಂಘಟನೆ ಚಳುವಳಿಯ ಕಾರ್ಯದೊತ್ತಡದಲ್ಲಿ ತಮ್ಮ ಆರೋಗ್ಯದ ಬಗ್ಗೆ ಗಮನಹರಿಸದ ಪರಿಣಾಮ 1996 ರಲ್ಲಿ ಮೊದಲ ಬಾರಿಗೆ ಹೃದಯಘಾತವಾಯಿತು. ಆಗ ಮೈಸೂರಿನ ಬಿ.ಎಂ.ಎಚ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿ ಸ್ಟಂಟ್ ಅಳವಡಿಸಿಕೊಂಡು ಚೇತರಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಖಾಯಿಲೆಗಳು ಇಡೀ ದೇಹವನ್ನು ಆವರಿಸಿತು. ಕಾರ್ಯದೊತ್ತಡದ ನಡುವೆ ಸಮಯಕ್ಕೆ ಸರಿಯಾಗಿ ಮಾತ್ರೆಯನ್ನಾಗಲಿ ಹಾಗೂ ಪಥ್ಯೆಯಾಗಲಿ ಇರಲಾಗುತ್ತಿರಲಿಲ್ಲ. ಈ ನಡುವೆ 2018 ಸೆಪ್ಟೆಂಬರ್ 28 ರಂದು ಮಂಡ್ಯದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಬಡ್ಡಿ ಪಂದ್ಯಾವಳಿಯಲ್ಲಿ ತಮ್ಮ ಪ್ರಾಯೋಜಕತ್ವದ "ಮೇಲುಕೋಟೆ ಮಾಣಿಕ್ಯ" ತಂಡ ಫೈನಲ್‌ಗೆ ಬಂದಿದ್ದರಿಂದ ಅದನ್ನ ಉರಿದುಂಬಿಸಲು ಬಂದಿದ್ದಾಗ ಹಠಾತ್ ಹೃದಯಘಾತವಾಯಿತು. ಕೂಡಲೇ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿದರಾದರು ಪ್ರಯೋಜನವಾಗದೆ ಬಾರದ ಲೋಕಕ್ಕೆ ಪಯಣಿಸಿದರು. ಕಾಕತಾಳೀಯ ಎಂಬಂತೆ ತಮ್ಮ ಕೊನೆ ಘಳಿಗೆಯಲ್ಲಿಯೂ ಕ್ರೀಡಾ ಸ್ಫೂರ್ತಿ ಮೆರೆದರು.

**ಪರಾಮರ್ಶನ ಗ್ರಂಥಗಳು**


- ಕುಮಾರ್, ಕೆ.ಎಂ, (2008). *ಕರ್ನಾಟಕದಲ್ಲಿ ರೈತ ಚಳುವಳಿ.* ಕನ್ನಡ ಸಾಹಿತ್ಯ ಪರಿಷತ್ತು.
- ಮಲ್ಲಿಕೇಶ್, ಹೆಚ್.ಹೆಚ್. (2020). *ಮಂಡ್ಯ ಜಿಲ್ಲಾ ರೈತ ಚಳುವಳಿಗಳು.* ಗಗನ ಪ್ರಕಾಶನ.
- ನವೀನ್‌ಕುಮಾರ್, ಕೆ.ಎನ್. (2023). *ಪ್ರಬುದ್ಧ ಪ್ರಜಾ ವಿಶೇಷ ಸಂಚಿಕೆ.* ಪ್ರಜಾವರ್ತೆ ಪ್ರಕಾಶನ.
- ಪುಟ್ಟಣ್ಣಯ್ಯ, ಕೆ.ಎಸ್. (1999). *ವಿಧಾನಸಭೆಯಲ್ಲಿ ರೈತ ಸಂಘದ ಶಾಸಕ 1994–1999.* ಕರ್ನಾಟಕ ರಾಜ್ಯ ರೈತ ಸಂಘ, ತಾಲೂಕು ಘಟಕ, ಪಾಂಡವಪುರ.
- ಪುಟ್ಟಣ್ಣಯ್ಯ, ಕೆ.ಎಸ್. (2017). *ಸದನದಲ್ಲಿ ರೈತನಾಯಕ ಕೆಎಸ್ ಪುಟ್ಟಣ್ಣಯ್ಯ.* ಅಭಿರುಚಿ ಪ್ರಕಾಶನ.
- ರವಿ ಪಾಂಡವಪುರ. (2018). *ರೈತ ಚೇತನ.* ಅಭಿರುಚಿ ಪ್ರಕಾಶನ.
- Muzaffar Assadi. (1997). *Peasant Movements in Karnataka 1980-1994.* Shipra.
- Nadkarni.M.V. (1992). *Farmers Movements in India.* Allied publishers Ltd.